# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



# ನೆಹೆಮಿಯನ
# ಪೌಳಿ
# ಗೋಡೆ

ಬರಹಗಾರರು: Edward Hughes

ಚಿತ್ರಲೇಖಕರು: Jonathan Hay

ಅಳವಡಿಸುವವರು: Mary-Anne S.

ಪದ್ಮಾ ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2014 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಪಾರಸಿಯ ದೇಶವು ಪ್ರಪಂಚವನ್ನು ಆಳಿದ ಪ್ರಭಲ ದೇಶವಾಗಿತ್ತು. ಅರಸನಾದ ಅರ್ತಷಸ್ತನ ಪಾರಸಿಯ ದೇಶವನ್ನು ಆಳುತ್ತಿದ್ದನು. ಅದು ಅವನನ್ನು ಪ್ರಪಂಚದದ ಪ್ರಭಾವವುಳ್ಳ ರಾಜನನ್ನಾಗಿ ಮಾಡಿತು. ನೆಹೆಮಿಯ ಎಂಬ ಹೆಸರುಳ್ಳ ಒಬ್ಬ ಯೆಹೋದ್ಯನು ಅರಸನ ಪ್ರಮುಖ ಸಹಾಯಕರಲ್ಲಿ ಒಬ್ಬನಾಗಿದ್ದನು. ಅವನು ಅರಸನ ಆಹರವನ್ನು ರುಚಿ ನೋಡಿ ಕಲುಷಿತ (ವಿಷ) ಆಹಾರದಿಂದ ಕಾಪಾಡುವುದು ಆತನ ಕೆಲಸವಾಗಿತ್ತು.



ಒಂದು ದಿನ ನೆಹೆಮಿಯನು ಅರಸನ ಮುಂದೆ ಕಳೆಗುಂದಿದವನಾಗಿ ಬಂದು ನಿಂತನು. ಅವನಿಗೆ ಏನಾಗಿದೆ ಎಂಬುದನ್ನು ತಿಳಿಯಲು ಅರಸನು ಬಯಸಿದನು. ನೆಹೆಮಿಯನು ‘ಅರಸನು ಚಿರಂಜೀವಿಯಾಗಿರಲಿ, ನನ್ನ ಪೂರ್ವಿಕರ ಸಮಾಧಿಯಿರುವ ಪಟ್ಟಣ ಹಾಳಾಗಿ ಅದರ ಬಾಗಿಲುಗಳು ಸುಟ್ಟು ಹೋಗಿವೆ ಅದಕ್ಕಾಗಿ ನಾನು ಕಳೆಗುಂದಿದವನಾಗಿದ್ದೇನೆ’ ಅಂದನು.



ಹಲವು ವರ್ಷಗಳ ಹಿಂದೆ ಯುದ್ದದಲ್ಲಿ ಹಾಳಾದ ಯೆರೊಸಲೇಮಿನ ಬಗ್ಗೆ ನೆಹೆಮಿಯನು ಮಾತಾಡುತ್ತಿದ್ದನು.

ಅರಸನಾದ ಅರ್ತಷಸ್ತನು "ನಿನ್ನ ಅಪೇಕ್ಷೆಯೇನು" ಎಂದು ಕೇಳಿದನು. ಅದಕ್ಕೆ ನೆಹೆಮಿಯನು ‘ನಾನು ಯೆಹೋದ ದೇಶಕ್ಕೆ ಹೋಗಿ ಪಟ್ಟಣವನ್ನು ಕಟ್ಟಲು ಯೆರೂಸಲೇಮಿಗೆ ಹೋಗಲು ನನಗೆ ಅಪ್ಪನೆಯಾಗಬೇಕೆಂದು’ ಬೇಡಿಕೊಂಡನು. ಅರಸನಾದ ಅರ್ತಷಸ್ತನು ದಯೆಯಿಂದ ಒಪ್ಪಿಕೊಂಡನು. ಹಾಗೆಯೆ ತನ್ನ ಪ್ರಯಾನದಲ್ಲಿ ತನ್ನನ್ನು ಕಾಪಾಡಿಕೊಳ್ಳಲು ಅಧಿಕೃತವಾದ ಪತ್ರಗಳನ್ನು ಕೊಟ್ಟನು.



ಅರಸನು ಅದಕ್ಕಿಂತ ಹೆಚ್ಚಾದ ಸಹಾಯವನ್ನು ಮಾಡಿದನು, ಹಾಗೆಯೇ ಅರಸನು ಅರಣ್ಯಕ್ಕೆ ಕಾವಲುಗಾರನಾಗಿರುವ ಆಸಾಫನಿಗೂ ಪತ್ರವನ್ನು ಕೊಟ್ಟನು, ಪೌಳಿಗೋಡೆಯನ್ನು ಕಟ್ಟಲು ಬೇಕಾಗುವಷ್ಟು ಮರವನ್ನು (ತೋಲೆ) ನೆಹೆನಿಯನಿಗೆ ಕೊಡಲು ಆಸಾಫನಿಗೆ ಆಜ್ಞಾಪಿಸಿದನು.



ನೆಹೆಮಿಯನು ಯೆರುಸಲೇಮಿಗೆ ಬಂದಾಗ ಪಟ್ಟಣದ ಅಧಿಕಾರಿಗಳನ್ನು ಒಟ್ಟುಗೂಡಿಸಿ "ನಾವು ದುರವಸ್ಥೆಯಲ್ಲಿದ್ದೇವೆ, ಪಟ್ಟಣವು ಹಾಳು ಬಿದ್ದಿದೆ, ಅದರ ಬಾಗಿಲುಗಳು ಸುಡಲ್ಪಟ್ಟಿವೆ, ಬನ್ನಿರಿ ತಿರುಗಿ ಕಟ್ಟೋಣ" ಎಂದು ಹೇಳಿದನು. ಅರಸನಾದ ಅರ್ತಷಸ್ತನ ಸಮ್ಮತಿ ಸುಚಿಸಿದ್ದಾನೆ ಎಂದನು. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ದೇವರು ಅವರ ಸಂಗಡ ಇದ್ದನು.



ನೆಹೆಮಿಯನಲ್ಲಿದ್ದಂತಹ ನಂಬಿಕೆ ಮತ್ತು ಉತ್ಸಾಹ ಜನರನ್ನು ಹುರಿದುಂಬಿಸಿತು, ತಿರುಗಿ ಕಟ್ಟೋಣ ಎಂದು ಎಲ್ಲರೂ ಒಪ್ಪಿಕೊಂಡರು. ಪ್ರತಿ ಒಂದು ಕುಟುಂಬವು ಗೋಡೆಯ ಒಂದು ಭಾಗವನ್ನು ಕಟ್ಟಲು ಮನಸ್ಸು ಮಾಡಬೇಕು ಎಂದು ನೆಹೆಮಿಯನು ಹೇಳಿದನು.



ಆದರೆ ಎಲ್ಲರೂ ಗೋಡೆಯನ್ನು ಕಟ್ಟುವುದಕ್ಕೆ ಒಪ್ಪಲಿಲ್ಲ. ಸನ್ಬಲ್ಲಟನು ಆತನ ಸ್ನೇಹಿತರು ಟೋಬಿಯ ಮತ್ತು ಗೆಷೆಮನು ಯಹೂದ್ಯರಲ್ಲದರಿಂದ ಅವರು ಗೋಡೆಯನ್ನು ಕಟ್ಟುವುದಕ್ಕಾಗಲಿ ಅಥವಾ ಬಾಗಿಲುಗಳನ್ನು ಹೊಂದಿಸುವುದಕ್ಕಾಗಲಿ ಇಚ್ಚೆಸಲಿಲ್ಲ.



ಕೆಲಸ ಮುಂದುವರಿಸುತ್ತಿರುವಾಗ ಸನ್ಬಲ್ಲಟನು ಬಹಳ ಕೋಪಗೊಂಡನು. ಆತನು ಮತ್ತು ಆತನ ಸ್ನೇಹಿತರು ಈ ಯಹೂದ್ಯರನ್ನು ಗೇಲಿ ಮಾಡಿದರು. ಅವರು ದುರ್ಬಲವಾದ ಗೋಡೆಯನ್ನು ಕಟ್ಟೀ ಮುಗಿಸಿದಾಗ ಒಂದು ಚಿಕ್ಕ ನರಿ ಬಂದು ನಾಶ ಮಾಡುತ್ತದೆ ಎಂದು ಟೋಬಿಯನು ಹೇಳಿದನು. ನೆಹೆಮಿಯನು ಏನು ಮಾತಡಲಿಲ್ಲ ಬದಲಾಗಿ ದೇವರೆ ಅವರನ್ನು ನೋಡಿಕೊಳ್ಳಲಿ ಎಂದು ಪ್ರಾರ್ಥಿಸಿದನು.



ಅವರ ತಿರಸ್ಕಾರದ ಗೇಲಿಯು ಯಾವುದೆ ರೀತಿಯ ಪರಿನಾಮವನ್ನು ಬೀರದೆ ಇದ್ದದರಿಂದ ಅವರು ಯೆರುಸಲೆಮಿಗೆ ವಿರುದ್ದವಾಗಿ ತೂಂದರೆಯುಂಟುಮಾಡಲು ಎಷ್ಟು ಸಾದ್ಯವ್ರೂ ಅಷ್ಟು ಕುಯುಕ್ತಿಗಳನ್ನು ಕಲ್ಪಿಸಿದರು.



ನೆಹೆಮಿಯನು ದೇವರೆ ಸಹಾಯಕ್ಕಾಗಿ ಪ್ರಾರ್ಥಿಸಿದನು. ಯಾವುದೆ ಆಶ್ಚರ್ಯಕರ ಘಟನೆಗೆ ಅವಕಾಶ ಕೊಡಬಾರದೆಂಬುದಾಗಿ ಆತನು ಹಗಲು ರಾತ್ರಿ ಕಾಯುವುದಕ್ಕೆ ಕವಲುಗಾರರನ್ನು ನೇಮಿಸಿದನು.



ಯಹೂದ್ಯರು ಕಠಿಣವಾಗಿ ಕೆಲಸ ಮಾಡಿದ್ದರಿಂದ ಅವರು ಬಳಲಿದರು. ಅವರು ಕೆಲಸ ಮಾಡುತ್ತಿರುವಾಗ ಶತ್ರುಗಳೆನಾದರು ಬಂದು ಅವರನ್ನು ಕೊಂದುಬಿಡುತ್ತಾರೆಂಬುದಾಗಿ ಅವರಲ್ಲಿ ಕೆಲವರು ಹೆದರಿದರು. ಆದರೂ ನೆಹೆಮಿಯನು ಕೆಲಸವನ್ನು ನಿಲ್ಲಿಸಲಿಲ್ಲ. ನೆಹೆಮಿಯನು ಕಾವಲುಗಾರರಿಗೆ, ಯಾವುದೆ ಶತ್ರುಗಳಿಗಿಂತಲು ಶಕ್ತನಾದವನು ನಮ್ಮ ಸಂಗಡ ಇದ್ದಾನೆ ಎಂದು ಹೇಳಿ ಅವರನ್ನು ಕಾವಲಿರಿಸಿದನು.





ನೆಹೆಮಿಯನು ಒಳ್ಳೇಯ ಉದಾಹರನೆಯಾಗಿರಲು ಪ್ರಯತ್ನಿಸಿದನು. ಅರಸನಾದ ಅರ್ತಷಸ್ತನು ಅವನನ್ನು ಯೆರುಸಲೆಮಿನ ಅಧಿಪತಿಯನ್ನಾಗಿ ಮಾಡಿ, ಆಹಾರ ಸಂಪಾದಿಸುವುದಕ್ಕೆ ಜನರಿಂದ ಹಣಕ್ಕಾಗಿ ಬೇಡಿಕೆಯಿಟ್ಟನು.

ಆದರೆ ಅದನ್ನು
ಮಾಡಲು ನೆಹೆಮಿಯನು
ಒಪ್ಪಲಿಲ್ಲ. ಅವನು ಗೋಡೆಯನ್ನು
ಕಟ್ಟುವವರೋಂದಿಗೆ ಕಠಿಣವಾದ
ಕೆಲಸವನ್ನು ಮಾಡಿದನು. ಅವನು
ಆಹಾರವನ್ನು ಕೋಳ್ಳುವುದಕ್ಕೆ ಸ್ವಂತ
ಹಣವನ್ನು ಉಪಯೋಗಿಸುತ್ತಿದ್ದನು.



ಜನರು ಕೆಲಸವನ್ನು ಪೂರ್ಣಗೊಳಿಸಿದರು. ಕೊನೆಯದಾಗಿ ಮುಖ್ಯ ದ್ವಾರಕ್ಕೆ ಬಾಗಿಲುಗಳನ್ನು ಮಾತ್ರ ಹಾಕಬೇಕಾಗಿತ್ತು. ಅಲ್ಲಿ ಗೋಡೆಗಳಲ್ಲಿ ಯಾವುದೆ ಸಂದುಗಳಿಲ್ಲ ಎಂಬ ಸುದ್ದಿಯನ್ನು ಸನ್ಬಲ್ಲಟನೂ, ಟೋಬಿಯ ಮತ್ತು ಗೆಷೆಮನಿಗೆ ತಿಳಿದಾಗೆ ಅವರು ನೆಹೆಮಿಯನಿಗೆ ಕೆಡುಕನ್ನುಂಟುಮಾಡಲು ಆಲೋಚಿಸಿದರು.



ಈ ಮೂವರು ನೆಹೆಮಿಯನಿಗೆ ಓನೋ ಎಂದು ಕರೆಲ್ಪಡುವ ಸ್ಥಳದಲ್ಲಿ ಭೇಟಿಯಾಗೋಣ ಬಾ ಎಂಬುದಾಗಿ ಸಂದೇಶವನ್ನು ಕಳುಹಿಸಿದರು. ಆದರೆ ಅವರು ಅವನನ್ನು ಪಟ್ಟಣದಿಂದ ಹೋರಗೆ ಹಾಕಲು ವಂಚಿಸಿ ಕೇಡುಮಾಡುತ್ತಾರೆಂಬುದಾಗಿ ನೆಹೆಮಿಯನಿಗೆ ತಿಳಿದಿತ್ತು. ನೆಹೆಮಿಯನು ಅವರಿಗೆ "ತನ್ನ ಕೆಲಸವನ್ನು ಬಿಟ್ಟು ಬರಲಾಗುವುದಿಲ್ಲ" ಎಂದು ಬರೆದು ಕಳುಹಿಸಿದನು.




ಕೊನೆಯ ಗೋಡೆಯು
ಪೂರ್ಣಗೊಂಡಿತು,
ಮತ್ತು
ನೆಹೆಮಿಯನು
ಕಾವಲು ಕಾಯುವುದಕ್ಕೆ
ಕಾವಲುಗಾರನ್ನು ನೇಮಿಸಿದನು.


ಸೂರ್ಯನು
ಸರಿಯಾಗಿ ಮೇಲೆ
ಬರುವುದಕ್ಕಿಂತ
ಮುಂಚಿತವಾಗಿ ಬಾಗಿಲುಗಳನ್ನು
ತೆರೆಯಬಾರದೆಂಬುದಾಗಿ, ...


... ಮತ್ತು ರಾತ್ರಿ ಇಡೀ
ಮುಚ್ಚಿರಬೇಕೆಂಬುದಾಗಿ
ಅಪ್ಪಣೆ ಮಾಡಿದನು.

ಈಗ ಪಟ್ಟಣವು ಸುರಕ್ಷಿತವಾಗಿತ್ತು, ಲೋಕದ ಕಡೆಗಳಲ್ಲಿ ಸೆರೆಯಾಗಿ ಚದರಿಹೊಗಿದ್ದ ಯಹೂದ್ಯರು ಮತ್ತೆ ಯೆರುಸಲೆಮಿಗೆ ತಿರುಗಿ ಬಂದರು. ನೆಹೆಮಿಯನು ಎಲ್ಲ ಅಡತಡೆಗಳ ಮಧ್ಯದಲ್ಲಿ ದೇವರು ಆತನಿಗೆ ಕೊಟ್ಟ ಕೆಲಸವನ್ನು ಪೂರ್ಣಗೊಳಿಸಿ ಬಹಳ ಸಂತೋಷಿಸಿದನು.



ಅವನು ಯಾವಾಗಲು ದೇವರಿಗೆ ವಿಧೇಯನಾಗಿ ಜನರಿಗೆ ಸಹಾಯ ಮಡುತ್ತಾ ಯೆರುಸಲೇಮಿನಲ್ಲಿ ವಾಸಿಸಿದನು.



ನೆಹೆಮಿಯನ ಪೌಳಿ ಗೋಡೆ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ನೆಹೆಮಿಯನು

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ 119:130

# ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16